**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.1666/2022.</u>**

**ದಿನಾಂಕಃ 19-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಶ್ರೀಮತಿ ಲೀಲಾವತಿ | ಚಾಸಾ-1, ಪ್ರಾಸ-1 |
| ಗಂಡನ ಹೆಸರು | ಃ | ರಾಜಪ್ಪ | |
| ವಯಸ್ಸು | ಃ | 50 ವರ್ಷ | |
| ಉದ್ಯೋಗ | ಃ | ಉಪ ನಿರೀಕ್ಷಕರು, ಪಂಚನಹಳ್ಳಿ ಪೊಲೀಸ್ ಠಾಣೆ | |
| ವಾಸ | ಃ | ಪಂಚನಹಳ್ಳಿ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ಜುಲೈ 2020 ರಿಂದ ನವೆಂಬರ್ 2022 ರವರೆಗೆ ಸಿಂಗಟಗೆರೆ ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕಳಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ29.01.2022 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಚಾಸಾ 4 ರಿಂದ 6 ರವರೊಂದಿಗೆ ಸೋಮನಹಳ್ಳಿ ತಾಂಡ್ಯದಲ್ಲಿ ಗಸ್ತು ಕರ್್ತವ್ಯದಲ್ಲಿ ಇದ್ದಾಗ ನನಗೆ ರವಿ ಬಿನ್ ಚೆಲುವಪ್ಪ ಎಂಬುವವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ನಾನು ಸದರಿ ಸ್ಥಳಕ್ಕೆ ಹೋಗಿ ಸೋಮನಹಳ್ಳಿ ಗ್ರಾಮದ ಅರಳಿ ಮರದ ಕೆಳಗೆ ಕುತಿಳಿದ್ದ ಚಾಸಾ-2 ಮತ್ತು 3 ರವರಿಗೆ ಮಾತಿಯನ್ನು ತಿಳಿಸಿ ದಾಳಿಗೆ ಸಹಕರಿಸುವಂತೆ ಕೋರಿ ನೊಟೀಸ್ ನೀಡಿರುತ್ತೇನೆ. ಸದರಿ ನೋಟೀಸ್ ಮತ್ತು ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ನೋಟೀಸ್ ಅನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ, ಚಾಸಾ 2 ಮತ್ತು 3 ರವರೊಂದಿಗೆ ನಾವು ಸಂಜೆ 6 ಗಂಟೆ ಸಮಯದಲ್ಲಿ ಆರೋಪಿ ಮನೆಯ ಬಳಿ ಹೋಗಿ ಸ್ವಲ್ಪ ದೂರದಲ್ಲಿ ವಾಹನ ನಿಲ್ಲಿಸಿದಾಗ ಆರೋಪಿಯು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದರು. ನಂತರ ನಾನು ಸಿಬ್ಬಂದಿಗಳ ಸಹಾಯದಿಂದ ಆರೋಪಿಯನ್ನು ಹಿಡಿದು ಅವರ ಹೆಸರು ವಿಳಾಸ ಕೇಳಿದಾಗ ಆತ ರವಿ ಬಿನ್ ಚೆಲುವಮೂರ್ತಿ, ಸೋಮನಹಳ್ಳಿ ಗ್ರಾಮ ಎಂದು ತಿಳಿಸಿದರು. ನಿಮ್ಮ ಬಳಿ ಇರುವ ವಸ್ತುಗಳನ್ನು ಪರಿಶೀಲನೆ ಮಾಡಬೇಕು ಎಂದು ಪರಿಶೀಲನೆ ಮಾಡಿದಾಗ ಆತನ ಕೈನಲ್ಲಿ ಹಸಿರು-ಹಳದಿ ಮಿಶ್ರಿತ ಪ್ಲಾಸ್ಟಿಕ್ ಚೀಲವಿತ್ತು, ಅದರಲ್ಲಿ 90 ಎಂ.ಎಲ್.ನ 46 ರಾಜಾವಿಸ್ಕಿ

ಪೌಚುಗಳು ಇರುವುದು ಕಂಡುಬಂದವು. ಸದರಿ ಮದ್ಯ ಮಾರಾಟ ಮಾಡಲು ಪರವಾನಗೆ ಇದೆಯೇ ಎಂದು ಆತನನ್ನು ಕೇಳಿದಾಗ ಯಾವುದೇ ಪರವಾನಗೆ ಇಲ್ಲ ಎಂದು ಉತ್ತರಿದರು. ಸದರಿ ಮದ್ಯವನ್ನು ಎಲ್ಲಿಂದ ತಂದಿರಿರುತ್ತೀರಿ ಎಂದು ಕೇಳಿದಾಗ ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲ. ನಂತರ ಸಂಜೆ 6.10 ರಿಂದ 6.40 ಗಂಟೆ ವರೆಗೂ ವರದಿಯನ್ನು ತಯಾರಿಸಿ ಚಾಸಾ 6 ರವರ ಮುಖಾಂತರ ಠಾಣೆಗೆ ಕಳುಹಿಸಿರುತ್ತೇನೆ. ಸಾಕ್ಷಿಯು ವರದಿ/ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು.

ನಂತರ, ಠಾಣೆಗೆ ಕರೆ ಮಾಡಿ ಮೊಕದ್ದಮೆ ನಂಬರ್ ತಿಳಿದುಕೊಂಡಿರುತ್ತೇನೆ. ನಂತರ, ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 7.05 ಗಿಂದ 7.35 ಗಂಟೆಯವರೆಗೂ ಮಹಜರ್ ಮಾಡಿ ಸದರಿ ಮದ್ಯದ ಪಾಕೆಟುಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಪೋಟೋ ತೆಗೆಸಿರುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಆ ದಿನ ತೆಗೆದ ಪೋಟೋ ನೋಡಿ, ಅದರಲ್ಲಿ ತಾನು, ಪಂಚರು, ಆರೋಪಿ ಮತ್ತು ಸಿಬ್ಬಂದಿಗಳು ಇರುವುದನ್ನು ಗುರುತಿಸಿದರು. ಸದರಿ ಪೋಟೋವನ್ನು ನಿಪಿ4 ಎಂದು ಗುರುತಿಸಲಾಯಿತು.

ಸಾಕ್ಷಿಯು ಸದರಿ ಚೀಲ ಮತ್ತು ಅದರಲ್ಲಿರುವ ಮದ್ಯದ ಪಾಕೆಟುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು. ಮು ಮಾ 1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಮು ಮಾ 1 ಎಂದು ಗುರುತಿಸಲಾಯಿತು.

ಆರೋಪಿಯನ್ನು ಸಾಕ್ಷಿಯು ಈ ದಿನ ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ ಆರೋಪಿ ಪರ ಶ್ರಿ. ಎನ್.ಎಸ್ ವಕೀಲರಿಂದಃ</u>

ನಮಗೆ ಯಾವುದೇ ಖಚಿತ ಮಾಹಿತಿ ಬಂದರೆ ತಕ್ಷಣ ಪ್ರ.ವ.ವರದಿ ದಾಖಲು ಮಾಡಬೇಕು ಎಂದರೆ ಸಾಕ್ಷಿಯು ಕೆಲವೊಂದು ಬಾರಿ ತಪ್ಪು ಮಾಹಿತಿ ಸಹಃ ಬರುತ್ತದೆ ಆ ಕಾರಣ ಪ್ರ.ವ.ವರದಿ ದಾಖಲು ಮಾಡಿರುವುದಿಲ್ಲ. ಮಾಹಿತಿ ಬಂದಾಗ ನಾವು ಸೋಮನಹಳ್ಳಿ ತಾಂಡ್ಯದಲ್ಲಿ ಇದ್ದೆ. ಸದರಿ ಸ್ಥಳದಿಂದ ಸೋಮನಹಳ್ಳಿ ಗ್ರಾಮಕ್ಕೆ ಸುಮಾರು 2 ಕಿ ಮೀ

ಅಂತರವಿದೆ. ನಾನು ಸೋಮನಹಳ್ಳಿ ತಾಂಡ್ಯದಿಂದ ಸೋಮನಹಳ್ಳಿ ಗ್ರಾಮಕ್ಕೆ ಹೋಗುವಾಗ ಜನರು ಓಡಾಡುತ್ತಿದ್ದರು. ಸದರಿ ಜನರನ್ನು ನಾನು ಪಂಚರಾಗಿ ಕರೆಯುವ ಪ್ರಯತ್ನ ಮಾಡಿಲ್ಲವೆಂದರೆ ಘಟನೆಯು ಸೋಮನಹಳ್ಳಿ ಗ್ರಾಮದಲ್ಲಿ ಆದ ಕಾರಣ ಅಲ್ಲಿಯ ಪಂಚರನ್ನು ಕರೆಯೋಣ ಎಂದು ಹೋಗಿರುತ್ತೇನೆ. ನಿಪಿ4 ಪೋಟೋವನ್ನು ಮಹಜರ್ ಕಾಲದಲ್ಲಿ ತೆಗೆದಿರುತ್ತೇನೆ. ನಿಪಿ4 ಪೋಟೋವನ್ನು ನಾನು ಸಂಜೆ 7 ಗಂಟೆಗೆ ತೆಗೆಸಿರುತ್ತೇನೆ. ನಿಪಿ 4 ರಲ್ಲಿ ಮಹಜರಿನಲ್ಲಿ ನಮೂದಿಸಿದಂತೆ ಲೈಟ್ ಕಂಬ ಕಾಣುತ್ತಿಲ್ಲ ಎಂದರೆ ಸರಿ. ನಿಪಿ 4 ಲೈಟ್ ಬೆಳಕಿನಿಂದ ತೆಗೆದ ರೀತಿ ಕಾಣುತ್ತಿಲ್ಲ ಅದು ಹಗಲುವೇಳೆಯದಲ್ಲಿ ತೆಗೆದಿರುವ ರೀತಿ ಕಾಣುತ್ತಿದೆ ಎಂದರೆ ಸರಿಯಲ್ಲ. ಆರೋಪಿಯನ್ನು ನೋಡಿದ ತಕ್ಷಣ ನಾನು ವರದಿ ತಯಾರಿಸಿ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಆರೋಪಿಯನ್ನು ಹಿಡಿದಾಗ ಸಂಜೆ 6 ಗಂಟೆಯಾಗಿತ್ತು. ಆರೋಪಿಯನ್ನು ನೋಡಿದ ತಕ್ಷಣ ಠಾಣೆಯಲ್ಲಿ ಪ್ರ.ವ.ವರದಿ ದಾಖಲಿಸಲು ತೊಂದರೆ ಇತ್ತೆ ಎಂದರೆ ನನಗೆ ವರದಿ ತಯಾರಿಸಲು ಕಾಲವಕಾಶ ಬೇಕಾಗಿತ್ತು.

ಪಂಚರಿಗೆ ನಾನು ನೋಟೀಸು ಜಾರಿ ಮಾಡಿರುವುದಿಲ್ಲ, ನಂತರ ಅವರ ಅವರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ನಾನು ಮು ಮಾ 1 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮಹಜರನ್ನು ಸ್ಥಳದಲ್ಲಿ ತಯಾರು ಮಾಡಿರುವುದಿಲ್ಲ, ಠಾಣೆಯಲ್ಲ ತಯಾರು ಮಾಡಿ ಠಾಣೆಯಲ್ಲಿಯೇ ಪಂಚರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಯಾವುದೇ ವರದಿ ಕಳುಹಿಸಿಲ್ಲ ನಂತರ ಈ ಪ್ರಕರಣಕ್ಕೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಮು ಮಾ 1 ಕ್ಕು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಠಾಣಾ ಅಂಕಿಅಂಶಕ್ಕಾಗಿ ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ,

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.